# ಶಾಲೆಗಳಿಗೆ ಪಠ್ಯಪುಸ್ತಕಗಳನ್ನು ಒಯ್ಯುವುದು

ಪಾರ್ಥಸಾರಥಿ ಮಿಶ್ರಾ

ಅದು 2016 ರ ಒಂದು ಸುಡು ಬೇಸಿಗೆಯ ಮಧ್ಯಾಹ್ನವಾಗಿತ್ತು. ಭಾರತದ ರಾಜ್ಯವೊಂದರ ರಾಜಧಾನಿಯಲ್ಲಿ ಆ ರಾಜ್ಯದ ಪಠ್ಯಪುಸ್ತಕಗಳ ನವೀಕರಣದ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ನಮ್ಮನ್ನು ಆಹ್ವಾನಿಸಲಾಗಿತ್ತು. ನಾವು ರಾಜ್ಯದ  (ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಮಂಡಳಿ) ಬೋಧಕವರ್ಗದೊಂದಿಗೆ ಕೆಲಸ ಮಾಡುತ್ತಿದ್ದೆವು ಮತ್ತು ನಮ್ಮೊಂದಿಗೆ ಶಿಕ್ಷಣ ಕ್ಷೇತ್ರದಲ್ಲಿಯೇ ಕೆಲಸ ಮಾಡುತ್ತಿದ್ದ ಇನ್ನೂ ಎರಡು ಸಂಸ್ಥೆಗಳಿಂದ ಬಂದ  ಕೆಲವು ಪಠ್ಯಪುಸ್ತಕ ಬರಹಗಾರರೂ ಇದ್ದರು. ಗಂಭೀರ ಚರ್ಚೆಗಳನ್ನೊಳಗೊಂಡ ಆ ಶೈಕ್ಷಣಿಕ ವಾತಾವರಣದಲ್ಲಿ ಇದ್ದಕ್ಕಿದ್ದಂತೆ ಘೋಷಣೆಗಳನ್ನು ಕೂಗುತ್ತ ಪ್ರತಿಭಟನೆಕಾರರ ಗುಂಪೊಂದು  ಕಟ್ಟಡವನ್ನು ಘೇರಾವೊ  ಮಾಡಿತು. ಸರಕಾರದಿಂದ ನಡೆಸಲ್ಪಡುವ ಪಠ್ಯಪುಸ್ತಕ ಪರಿಷ್ಕರಣೆಯ ಪ್ರಕ್ರಿಯೆಯಲ್ಲಿ 'ಸಾರಾಸಗಟಾಗಿ ಅಕ್ರಮ' ನಡೆದಿದೆ ಎಂದು ಆಪಾದಿಸುತ್ತ ಅವರು SCERT ಯ ನಿರ್ದೇಶಕರಿಗೆ ಒಂದು ಮನವಿ ಸಲ್ಲಿಸಲು ಬಂದಿದ್ದರು. ನಮ್ಮ ತಂಡಗಳಲ್ಲಿದ್ದ ಸಹೋದ್ಯೋಗಿಗಳು ಸದ್ಯ ಯಾರೂ ಹೊರಗೆ ಹೋಗಬೇಡಿ ಎಂದು ನಮಗೆ ಸಲಹೆಯಿತ್ತರು. ನಾನು ಕಿಟಕಿಯಿಂದಾಚೆಗೆ ಇಣುಕಿ ನೋಡಿದೆ. ಪ್ರತಿಭಟನೆ ನಡೆಸುತ್ತಿದ್ದವರನ್ನು ನೋಡಿ ನನಗೆ ಆಘಾತವಾಯಿತು, ಅವರಲ್ಲಿ ಹೆಚ್ಚಿನವರು ಇಪ್ಪತ್ತರ ವಯಸ್ಸಿನ  ಯುವಕರಾಗಿದ್ದರು! .

ಪಠ್ಯಪುಸ್ತಕವೊಂದರ ರಚನೆಯ ಪ್ರಕ್ರಿಯೆಯಲ್ಲಿ ಪಾಲ್ಗೊಂಡವರಿಗೆ ಶಿಕ್ಷಣಕ್ಕೆ ಸಂಬಂಧಿಸಿದಂತೆ ಉನ್ನತ ಪ್ರಾಧಿಕಾರದಿಂದ ನಿರ್ದೇಶಿಲ್ಪಟ್ಟ ಪಠ್ಯಕ್ರಮವೊಂದರ ಉದ್ದೇಶಗಳಿಗೆ ಅನುಸಾರವಾಗಿ ಅದರ ಪರಿಕಲ್ಪನೆಯನ್ನು ಪರಿಭಾವಿಸಿಕೊಂಡು, ಸಾಂದರ್ಭೀಕರಿಸಿ, ಪಠ್ಯಪುಸ್ತಕವೊಂದನ್ನು ರೂಪಿಸುವುದು ಸುಲಭದ ಕೆಲಸವೇನಲ್ಲ. ಶಿಕ್ಷಣ ಕ್ಷೇತ್ರದಲ್ಲಿ ಪಠ್ಯಕ್ರಮ ಯೋಜನೆ (curriculum), ಪಾಠಗಳು (syllabus) ಮತ್ತು ಪಠ್ಯಪುಸ್ತಕಗಳ (textbooks) ನಡುವೆ ಒಂದು ಹೊಕ್ಕುಳ ಬಳ್ಳಿಯ ಸಂಬಂಧವಿರುತ್ತದೆ. ಕಲಿಕಾರ್ಥಿಗಳಿಗೆ ಉತ್ತಮ ಗುಣಮಟ್ಟದ ಪಠ್ಯಪುಸ್ತಕಗಳನ್ನು ವಿನ್ಯಾಸಗೊಳಿಸುವ ಮತ್ತು ವಿತರಿಸುವ ಜವಾಬ್ದಾರಿಯನ್ನು ಹೊತ್ತವರು ಕಾರ್ಯನೀತಿಯಲ್ಲಿ ಅಡಕವಾಗಿರುವ ಮಾರ್ಗದರ್ಶಿ ಸೂಚಿಗಳಿಗೆ ಬದ್ಧರಾಗಿರಲು ತಮ್ಮ ಶಕ್ತಿಮೀರಿ ಪ್ರಯತ್ನಿಸುತ್ತಾರೆ. ಅವರ ಪ್ರಾಮಾಣಿಕ ಪ್ರಯತ್ನಗಳಿಗೆ ಹೊರತಾಗಿಯೂ ಪಠ್ಯಪುಸ್ತಕ ಬರಹಗಾರರು ತಮ್ಮ ಸಂಕುಚಿತ ರಾಜಕೀಯ ನಿಲುವಿನ ಉದ್ದೇಶಗಳ ಸಲುವಾಗಿ ಪಠ್ಯಪುಸ್ತಕಗಳ  ಫಲಾನುಭವಿಗಳ ಆಕ್ರೋಶ ಅಸಮಾಧಾನವನ್ನು ಎದುರಿಸುತ್ತ ಕವಲು ದಾರಿಗಳಲ್ಲಿರುತ್ತಾರೆ. ಹಾಗಾಗಿ ಪ್ರಸ್ತುತ  ಲೇಖನವು ಪಠ್ಯಕ್ರಮ ಯೋಜನೆಯನ್ನು ಪಾಠಗಳನ್ನಾಗಿ ಪರಿವರ್ತಿಸುವ ಪ್ರಕ್ರಿಯೆಯಲ್ಲಿ ನಿಜವಾಗಿ ಏನು ನಡೆಯುತ್ತದೆ ಎನ್ನುವುದನ್ನು ವಿವರಿಸುತ್ತ, ವಿಮರ್ಶಿಸುತ್ತ, ಹಾಗೂ ಅದರಲ್ಲಿ ಒಳ ವಿಷಯಗಳ ಆಯ್ಕೆಯನ್ನು ಕುರಿತ ನಿರ್ಣಯಗಳನ್ನು ಹೇಗೆ ಕೈಗೊಳ್ಳಲಾಗುತ್ತದೆ ಮತ್ತು ಅದನ್ನು ಒಟ್ಟೂ ಪಠ್ಯಕ್ರಮದ ಕ್ಷೇತ್ರದೊಳಗೆ ವ್ಯವಸ್ಥಿತವಾಗಿ ಹೇಗೆ ಸೇರಿಸಲಾಗುತ್ತದೆ ಎನ್ನುವುದನ್ನು ಎತ್ತಿ ತೋರಿಸುತ್ತ ಪಠ್ಯಪುಸ್ತಕಗಳ ಸುತ್ತ ಇರುವ ಅಸ್ಪಷ್ಟತೆಯನ್ನು

ತಿಳಿಗೊಳಿಸುವ ಒಂದು ಪ್ರಯತ್ನವಾಗಿದೆ. ಅಲ್ಲದೇ, ಪಠ್ಯಪುಸ್ತಕಗಳ ರಚನೆ, ಉತ್ಪಾದನೆ ಮತ್ತು ವಿತರಣೆಯ ಪ್ರಕ್ರಿಯೆಯ ಒಳಗೆ ಅದರಲ್ಲಿ ಪಾಲ್ಗೊಂಡವರ ನಡುವೆ ಸರಿಯಾದ ಸಂವಹನವಿರದಿದ್ದರೆ, ಪಠ್ಯಪುಸ್ತಕಗಳು ವಿದ್ಯಾರ್ಥಿಗಳಿಗೆ (ಅಂತಿಮವಾಗಿ ವಿದ್ಯಾರ್ಥಿಗಳೇ ಅದರ ಅಸಲಿ ಬಳಕೆದಾರರು) ಸಿಗುವಂತೆ ಮಾಡುವ ಇಡೀ ಕಸರತ್ತನ್ನೇ ಅದು ಹೇಗೆ ಏರುಪೇರಾಗಿಸುತ್ತದೆ ಎನ್ನುವುದನ್ನೂ ಇಲ್ಲಿ ತೋರಿಸಲು ಪ್ರಯತ್ನಿಸಲಾಗುತ್ತದೆ. ಪಠ್ಯಕ್ರಮವನ್ನು ವಿನ್ಯಾಸ ಮಾಡುವವರು, ಪಠ್ಯಪುಸ್ತಕದ ಬರಹಗಾರರು, ಚಿತ್ರ ಬಿಡಿಸುವವರು, ಪ್ರಕಾಶಕರು, ಶೈಕ್ಷಣಿಕ ಆಡಳಿತಗಾರರು, ನೀತಿರೂಪಕರು ಪ್ರತಿಯೊಬ್ಬರೂ ತಮ್ಮದೇ ನಿರ್ದಿಷ್ಟ ಆದ್ಯತೆಗಳನ್ನು ಮತ್ತು ದೃಷ್ಟಿಕೋನಗಳನ್ನು ಹೊಂದಿರುವುದರಿಂದ ಅವು ಬಹಳ ಸಲ ಪರಸ್ಪರ ಹೊಂದಾಣಿಕೆಯಾಗುವುದಿಲ್ಲ. ಹಾಗಾಗಿ ಒಂದು ನಿರ್ದಿಷ್ಟ ಪಠ್ಯಪುಸ್ತಕವನ್ನು ವಿನ್ಯಾಸಗೊಳಿಸುವಾಗ ಪರಸ್ಪರ ವಿರುದ್ಧವಾಗಿರುವ ಆದ್ಯತೆಗಳು ಮತ್ತು ದೃಷ್ಟಿಕೋನಗಳನ್ನು ಒಳಗೊಂಡು ರೂಪಿಸುವುದು ನಿಜಕ್ಕೂ ಹರಸಾಹಸವೇ ಆಗಿರುತ್ತದೆ.

**ಪಠ್ಯಪುಸ್ತಕಗಳ ಸ್ಪಷ್ಟೀಕರಣ**

ಭಾರತದ ಅನೇಕ ಭಾಗಗಳಲ್ಲಿ ಮುಂದುವರಿಸಿಕೊಂಡು ಬರಲಾಗುತ್ತಿರುವ ಸಂಪ್ರದಾಯದಂತೆ ಪಠ್ಯಪುಸ್ತಕದ ಪೂಜೆಯೊಂದಿಗೆ ಒಂದು ಮಗುವಿನ ವಿದ್ಯಾರಂಭವಾಗುತ್ತದೆ (ಔಪಚಾರಿಕ ಶಿಕ್ಷಣ). ಮಗುವಿಗೆ ಪಠ್ಯಪುಸ್ತಕವನ್ನು ಪರಿಚಯಿಸುವ ಈ ಆಚರಣೆಯು ಪಠ್ಯಪುಸ್ತಕವನ್ನು ಔಪಚಾರಿಕ ಕಲಿಕೆಗೆ ಪರ್ಯಾಯವಾಗಿ ನೋಡುತ್ತದೆ. ಮಗುವಿಗೆ ಅದು ಒಂದು ಪೂಜನೀಯ ವಸ್ತು, ಅದು ಪೀಠದಲ್ಲಿಟ್ಟು ಗೌರವಿಸಬೇಕಾದಂಥದ್ದು, ಅದು ಮಗು ಬಳಸುವ ಇತರ ಆಟದ ವಸ್ತುಗಳು, ಚಿತ್ರ ಪುಸ್ತಕ ಅಥವಾ ಇತರ ಮನೆಬಳಕೆಯ ವಸ್ತುಗಳಂತಲ್ಲ. ಮಕ್ಕಳು ಶಾಲೆಯನ್ನು ಪ್ರವೇಶಿಸಿದಾಗ ಅವರಿಗೆ ಪುಸ್ತಕವನ್ನು ಕೊಡಲಾಗುತ್ತದೆ, ಅದು ಮಕ್ಕಳ ಮತ್ತು ಶಾಲೆಯ (ವಿದ್ಯೆಯ/ಶಿಕ್ಷಣದ) ನಡುವಿನ ಬಂಧವನ್ನು ಗಟ್ಟಿ ಮಾಡುತ್ತದೆ. ಕಲಿಕೆಯಲ್ಲಿ ಅವರು ಪ್ರಗತಿ ಹೊಂದುತ್ತಿದ್ದಾರೆ ಎನ್ನುವುದನ್ನು ಸಾಬೀತು ಮಾಡಲು ಅವರು ಪುಸ್ತಕದಲ್ಲಿ ಕೊಟ್ಟ ಎಲ್ಲವನ್ನೂ ಕಂಠಪಾಠ ಮಾಡಬೇಕು ಮತ್ತು ಪರೀಕ್ಷೆಯಲ್ಲಿ ಮರಳಿ ಒಪ್ಪಿಸಬೇಕು.

ಮಕ್ಕಳ ಶಿಕ್ಷಕರಿಗೆ ಕೂಡಾ ತರಗತಿಯಲ್ಲಿ ಪಠ್ಯಪುಸ್ತಕವನ್ನು ಹಿಡಿದು ಪಾಠ ಮಾಡುವುದು ಇಡೀ ಶಿಕ್ಷಣಕ್ಕೆ ಪರ್ಯಾಯ ಎಂಬಂತೆ ಆಗಿರುತ್ತದೆ. ಪಠ್ಯಪುಸ್ತಕವು ಶಿಕ್ಷಕಿಯನ್ನು ಕಾಡುತ್ತದೆ, ಪಾಠಗಳನ್ನು ತಪ್ಪಿಸಿ, ಪುಸ್ತಕದಲ್ಲಿ ಕೊಟ್ಟದ್ದನ್ನು ಬಿಟ್ಟು ಪಾಠ ಮಾಡಿದರೆ ಆಡಳಿತವರ್ಗದವರ ಕೋಪಕ್ಕೆ ತುತ್ತಾಗಬೇಕು. ಅದನ್ನು ಆಕೆಯ ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿಗಳ ಪೋಷಕರು ಸಹಾ ಒಪ್ಪುವುದಿಲ್ಲ. ಹಾಗಾಗಿ ಆಕೆ ತನ್ನ ಶಿಕ್ಷಕ ತರಬೇತಿ ತರಗತಿಗಳಲ್ಲಿ ತಾನು ಕಲಿತ ಬೋಧನಾ ವಿಧಾನಗಳಿಗೆ ತಿಲಾಂಜಲಿ ಇಡುತ್ತ ಬೇರೆ ವಿಧಿಯಿಲ್ಲದೆ ಪಠ್ಯಪುಸ್ತಕಕ್ಕೆ ಶರಣಾಗುತ್ತಾರೆ.

ನಿಜ ಹೇಳಬೇಕೆಂದರೆ, ಪಠ್ಯಪುಸ್ತಕಗಳನ್ನು ಇಡೀ ಪಠ್ಯಕ್ರಮಕ್ಕೆ ಪರ್ಯಾಯವಾಗಿ ಬಳಸುವ ಅಭ್ಯಾಸವು ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಮಂಡಳಿಯಿಂದ (NCERT) ಪ್ರಕಟಗೊಂಡ ಪಠ್ಯಕ್ರಮ, ಪಾಠಗಳು ಮತ್ತು ಪಠ್ಯಪುಸ್ತಕಗಳ ಮೇಲಿನ ಪೊಸಿಶನ್ ಪೇಪರಿನ ಶಿಫಾರಸ್ಸಿಗೆ ವಿರುದ್ಧವಾಗಿದೆ. ಪಠ್ಯಪುಸ್ತಕಗಳಿಗೆ ಅಗತ್ಯಕ್ಕಿಂತ ಹೆಚ್ಚಿನ ಮಹತ್ತ್ವವನ್ನು ಕೊಡುತ್ತಿರುವ ಅಭ್ಯಾಸವನ್ನು ಕುರಿತು ವಿಷಾದ ವ್ಯಕ್ತಪಡಿಸುತ್ತಾ ಅದರ ಕಾರ್ಯನೀತಿ ದಾಖಲೆಯು ಇದನ್ನು ಗಮನಿಸುತ್ತದೆ:

"ಇವತ್ತು ನಡೆಯುತ್ತಿರುವ ತರಗತಿಯ ಪರಿಪಾಟಗಳನ್ನು ಗಮನಿಸಿದರೆ ಹೆಚ್ಚುಕಡಮೆ ದೇಶದ ಎಲ್ಲ ಶಾಲೆಗಳಲ್ಲಿಯೂ ಪಠ್ಯಪುಸ್ತಕಗಳೇ ಸಂಪೂರ್ಣ ಪ್ರಾಧಾನ್ಯವನ್ನು ಪಡೆದಿವೆ. ಅದರ ಫಲವಾಗಿ ಪಠ್ಯಪುಸ್ತಕಗಳ ಸುತ್ತ ಒಂದು ಪ್ರಭಾವಳಿ ರಚಿತವಾಗಿದೆ ಮತ್ತು ಅವುಗಳನ್ನು ಬಳಸುವುದು ಒಂದು ಸಾಮಾನ್ಯ ವಿಧಾನದಂತಾಗಿದೆ. ಈಗ ಮಗುವನ್ನು ಸಕ್ರಿಯ ಕಲಿಕೆಯಲ್ಲಿ ತೊಡಗಿಸಲು ಒಂದು ಪಠ್ಯಪುಸ್ತಕಕ್ಕಿಂತ ಹೆಚ್ಚಾಗಿ ಬೋಧನೆ ಮತ್ತು ಕಲಿಕೆಯ ಸಾಮಗ್ರಿಗಳನ್ನೊಳಗೊಂಡ ಒಂದಿಡೀ ಪ್ಯಾಕೇಜ್‌ನ ಆವಶ್ಯಕತೆಯಿದೆ. ಪಠ್ಯಪುಸ್ತಕವು ಈ ಪ್ಯಾಕೇಜ್‌ನ ಒಂದು ಭಾಗವಾಗಿರುತ್ತದೆ ಅಷ್ಟೇ, ಬೋಧನೆ ಮತ್ತು ಕಲಿಕೆಗೆ ಅದೊಂದೇ ಸಾಮಗ್ರಿಯಲ್ಲ (NCERT, 2006:37)."

ಪಠ್ಯಪುಸ್ತಕಗಳ ಪಾತ್ರ ಮತ್ತು ರಾಜಕಾರಣವು ಜಗತ್ತಿನೆಲ್ಲೆಡೆ ಚರ್ಚಾರ್ಹ ವಿಷಯವಾಗಿದೆ. ಪಠ್ಯಪುಸ್ತಕಗಳು ವಿದ್ಯಾರ್ಥಿಗಳ ಸ್ವಾಯತ್ತ ಕಲಿಕೆಯ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಬೀರುತ್ತವೆ ಮತ್ತು ಶಿಕ್ಷಕರ ಸೃಜನಶೀಲತೆಯನ್ನು ಹೊಸಕಿಹಾಕುತ್ತವೆ. ಪಠ್ಯಪುಸ್ತಕಗಳ ನಕಾರಾತ್ಮಕ ಪರಿಣಾಮಗಳನ್ನು ಎತ್ತಿ ತೋರಿಸುತ್ತ ಕೌಟ್ಸೆಲಿನಿ (2012:33) ಹೀಗೆ ಬರೆಯುತ್ತಾರೆ, 'ಪಠ್ಯಕ್ರಮಕ್ಕೆ ಪರ್ಯಾಯವಾಗಿ ಪಠ್ಯಪುಸ್ತಕಗಳನ್ನು ಇಡುವುದೆಂದರೆ ಇಡೀ ಶಿಕ್ಷಣ ಪ್ರಕ್ರಿಯೆಯನ್ನು ಪಠ್ಯಪುಸ್ತಕಗಳ ಒಳಗೆ ಸಿದ್ಧಪಡಿಸಿಟ್ಟ ಅಂತಿಮ ಉತ್ಪನ್ನದ ಒಂದು ವಿತರಣಾ ವ್ಯವಸ್ಥೆ ಎಂಬಂತೆ ನೋಡುವುದು; ಅದು ಶಿಕ್ಷಕರಿಂದ ವಿತರಿಸಲ್ಪಡಬೇಕು ಮತ್ತು ವಿದ್ಯಾರ್ಥಿಗಳು ಅದನ್ನು ಉರುಹೊಡೆಯಬೇಕು.' ಪಠ್ಯಪುಸ್ತಕವು 'ಶಿಕ್ಷಣ ಸಂಸ್ಕೃತಿಯಲ್ಲಿ ಶಿಕ್ಷಕನಿಗೆ ಇರುವ ಅಮುಖ್ಯ ಸ್ಥಾನದ' ಒಂದು ಸಂಕೇತ ಎಂದು ಕೃಷ್ಣಕುಮಾರ್ ಹೇಳುತ್ತಾರೆ (1986:1309).

ಶಾಲೆಗಳು, ಪ್ರಿನ್ಸಿಪಾಲರುಗಳು ಮತ್ತು ಶಿಕ್ಷಕರು 'ಪಠ್ಯಪುಸ್ತಕಗಳನ್ನು ಕಲಿಸಿಬಿಟ್ಟರೆ ಇಡೀ ಪಠ್ಯಕ್ರಮವನ್ನು ಒಳಗೊಂಡಂತೆ ಎಂದು ಯೋಚಿಸುವ ಅಥವಾ, ಮಕ್ಕಳ ಮೌಲ್ಯಮಾಪನವನ್ನು ಪಾಠದ ಕೊನೆಗೆ ಕೊಟ್ಟ ಅಭ್ಯಾಸ ಪ್ರಶ್ನೆಗಳ ಆಧಾರದ ಮೇಲೆ ಮಾಡುವುದು ಎಂದು ಯೋಚಿಸುವ' ಚೌಕಟ್ಟಿನ ಆಚೆ ಹೋಗಬೇಕು ಎಂದು ಇತ್ತೀಚೆಗೆ 2019ರ ಜನವರಿ 18ರಂದು ಹೊರಡಿಸಿದ ಒಂದು ಸುತ್ತೋಲೆಯಲ್ಲಿ ಸಿಬಿಎಸ್‌ಇ ಬೋರ್ಡ್ ಸ್ಪಷ್ಟವಾಗಿ ಹೇಳಿದೆ.

**ಭಾರತದ ಸಂದರ್ಭದಲ್ಲಿ ಪಠ್ಯಪುಸ್ತಕಗಳ ಮಾಲೀಕತ್ವ**

ಭಾರತದಲ್ಲಿ ಪಠ್ಯಪುಸ್ತಕಗಳ ಉತ್ಪಾದನೆಯ ಒಂದು ಸಾಂಸ್ಥಿಕ ಕಾರ್ಯವಿಧಾನವು 1961 ರಲ್ಲಿ ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಮಂಡಳಿಯ (NCERT) ಸ್ಥಾಪನೆಯೊಂದಿಗೆ ಆರಂಭವಾಯಿತು. ಅದರ ಅನಂತರ ಎನ್ಸಿಇಆರ್‌ಟಿ ಯನ್ನೇ ಮಾದರಿಯಾಗಿಟ್ಟುಕೊಂಡು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಮಂಡಳಿಗಳು (SCERT) ಹೆಚ್ಚುಕಡಮೆ ಎಲ್ಲ ರಾಜ್ಯಗಳಲ್ಲಿಯೂ ಸ್ಥಾಪನೆಗೊಂಡವು. ಇಡೀ ದೇಶದ ಪಠ್ಯಪುಸ್ತಕಗಳು ಎನ್ಸಿಇಆರ್‌ಟಿಯಿಂದಲೇ ತಯಾರಾಗಿ ಬರುತ್ತವೆಯಾದರೂ ಪ್ರತೀ ರಾಜ್ಯದ ಶಾಲೆಗಳಿಗೆ ಸಂಬಂಧಿಸಿದಂತೆ ಪಠ್ಯಪುಸ್ತಕ ರಚನೆಯ ಕಾರ್ಯವಿಧಾನಗಳಲ್ಲಿ ವ್ಯತ್ಯಾಸವಿದೆ. ಕೆಲವು ರಾಜ್ಯಗಳಲ್ಲಿ, ಪಠ್ಯಪುಸ್ತಕ ರಚನೆ ಮತ್ತು ಪ್ರಕಟಣೆಯ ಪ್ರಾಧಿಕಾರಗಳಿಗೆ ಈ ಜವಾಬ್ದಾರಿಯನ್ನು ವಹಿಸಿದ್ದರೆ, ಇನ್ನೂ ಕೆಲವು ರಾಜ್ಯಗಳಲ್ಲಿ ಸೆಕೆಂಡರಿ ಶಿಕ್ಷಣ ಸಮಿತಿ, ಹೈಯರ್ ಸೆಕೆಂಡರಿ ಅಥವಾ ಪ್ರಾಥಮಿಕ ಶಿಕ್ಷಣ ಸಮಿತಿಗಳು ಶಾಲಾ ಪಠ್ಯಪುಸ್ತಕಗಳ ನೋಡಲ್ ಏಜೆನ್ಸಿಗಳಾಗಿರುತ್ತವೆ. ಅಷ್ಟೇ ಅಲ್ಲ, ಕೆಲವು ರಾಜ್ಯಗಳಲ್ಲಿ ಸರಕಾರದಿಂದ ಪ್ರಾಯೋಜಿತಗೊಂಡ ಒಂದಕ್ಕಿಂತ ಹೆಚ್ಚು ಮಂಡಳಿಗಳು ಪಠ್ಯಪುಸ್ತಕ ರಚನೆಯ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿರುತ್ತವೆ, ಅದರ ಪರಿಣಾಮವಾಗಿ ಈ ಶೈಕ್ಷಣಿಕ ಸಮಿತಿಗಳು ತಮ್ಮ ತಮ್ಮಲ್ಲೇ ಕಿತ್ತಾಡುತ್ತ ಇರುವುದರಿಂದ ಶೈಕ್ಷಣಿಕ ಮತ್ತು ಆಡಳಿತ ಸಂಬಂಧಿ ವೈರತ್ವವು ಅಲ್ಲಿ ತಲೆದೋರುತ್ತದೆ.

**ವಿಷಯಗಳನ್ನು ಆಯ್ಕೆ ಮಾಡಲು ಇರುವ ಮಾನದಂಡ**

ಸರ್ಕಾರವು ಪಠ್ಯಪುಸ್ತಕ ಸಮಿತಿಯನ್ನು ರೂಪಿಸಿದ ಅನಂತರ ಸಮಿತಿಯ ಸದಸ್ಯರು ಪಠ್ಯಪುಸ್ತಕದೊಳಗೆ ಏನೇನಿರಬೇಕು ಎಂಬ ವಿಷಯವನ್ನು ಆಯ್ಕೆ ಮಾಡಲು ಕೆಲವು ಸ್ಥೂಲರೂಪದ ತತ್ತ್ವಗಳನ್ನು ನಿರ್ಧರಿಸಲೆಂದು ವಿಚಾರ-ವಿನಿಮಯಕ್ಕಾಗಿ (brain-storming) ಒಂದೆಡೆ ಸೇರುತ್ತಾರೆ. ಈ ವಿಚಾರ ವಿನಿಮಯ ಸಭೆಗಳಲ್ಲಿ ಸಾಮಾನ್ಯವಾಗಿ ಈ ಕೆಳಗಿನ ಅಂಶಗಳನ್ನು ಪರಿಗಣಿಸಲಾಗುತ್ತದೆ. ಈ ಸಭೆಗಳಿಗೆ SCERT ಯ ನಿರ್ದೇಶಕರು ಅಥವಾ ನಿರ್ದಿಷ್ಟ ಜ್ಞಾನವಿಭಾಗದ ವಿಶೇಷ ತಜ್ಞರೊಬ್ಬರು ಅಧ್ಯಕ್ಷರಾಗುತ್ತಾರೆ. ಈ ಕೆಳಗಿನ ಅಂಶಗಳನ್ನು ಅಲ್ಲಿ ಚರ್ಚಿಸಲಾಗುತ್ತದೆ:

ಎ) ದೇಶದ ಶೈಕ್ಷಣಿಕ ಗುರಿಗಳು ಮತ್ತು ಸಾಂವಿಧಾನಿಕ ಮೌಲ್ಯಗಳಿಗೆ ಹೊಂದಿಕೊಳ್ಳುವಂತೆ ವಿಷಯಗಳನ್ನು ಆಯ್ಕೆ ಮಾಡುವುದು

ಬಿ) ಪಠ್ಯಪುಸ್ತಕಗಳಲ್ಲಿ ವಿದ್ಯಾರ್ಥಿಗಳ ಕಲಿಕಾ ಹಂತ ಮತ್ತು ವಯಸ್ಸಿಗೆ ಅನುಗುಣವಾಗಿ ಬಳಸಬಹುದಾದ ವಿಷಯಗಳನ್ನು ಆರಿಸುವುದು

ಸಿ) ಪ್ರಾದೇಶಿಕ, ರಾಷ್ಟ್ರೀಯ ಮತ್ತು ಜಾಗತಿಕ ಮಟ್ಟದ ವಿಷಯಗಳ ಸಂತುಲನವನ್ನು ಕಾಯ್ದುಕೊಳ್ಳುವುದು

ಡಿ) ಬೋಧನಾ ವಿಧಾನಕ್ಕೆ ಸೂಕ್ತವಾಗುವಂತಹ ವಿಷಯಗಳನ್ನು ಸೂಚಿಸುವುದು

ಇ) ವಿಷಯಗಳ ಆಯ್ಕೆಯಲ್ಲಿ ವರ್ಗ, ಜಾತಿ ಮತ್ತು ಲಿಂಗಗಳನ್ನು ಆಧರಿಸಿದ ರೂಢಮಾದರಿಗಳನ್ನು ಕೈಬಿಡುವುದು

ಎಫ್) ವಿಷಯಗಳ ಕ್ಲಿಷ್ಟತೆಯ ಮಟ್ಟ.

ಸಮಿತಿಯ ಸದಸ್ಯರಿಗೆ ಭಾಷಾ ಪಠ್ಯಗಳಿಗೆ ಸಂಬಂಧಿಸಿದಂತೆ ಭಾಷಾ ಬೋಧನೆಯ ಸೈದ್ಧಾಂತಿಕ ದೃಷ್ಟಿಕೋನಗಳು ಮತ್ತು ಬೋಧನಾ ವಿಧಾನಕ್ಕೆ ಅವು ಯಾವ ರೀತಿಯಲ್ಲಿ ಪರಿಣಾಮ ಬೀರುತ್ತವೆ ಎಂಬುದು ಮುಖ್ಯವಾದ ಚರ್ಚಾ ವಿಷಯವಾಗಿರುತ್ತದೆ. ಹಾಗೆಯೇ, ಸಮಾಜ ವಿಜ್ಞಾನದ ಪಠ್ಯಗಳಿಗೆ ಸಂಬಂಧಿಸಿದಂತೆ ವಿಷಯಗಳ ಆಯ್ಕೆಯಲ್ಲಿ ಸದಸ್ಯರ ಸೈದ್ಧಾಂತಿಕ ನಿಲುವುಗಳು ಮತ್ತು ದೃಷ್ಟಿಕೋನಗಳು ಅತೀ ಹೆಚ್ಚು ಚರ್ಚೆಗೆ ಒಳಗಾಗುತ್ತವೆ.

ಪ್ರಾಥಮಿಕ ಶಾಲಾ ಮಟ್ಟದ ಪಠ್ಯಗಳನ್ನು ತಯಾರಿಸುವಾಗ ಮಗು ಕೇಂದ್ರಿತ, ಮಕ್ಕಳ ವಯಸ್ಸಿಗೆ ಸೂಕ್ತವಾಗುವಂತಹ ವಿಷಯಗಳನ್ನು ಆಯ್ದುಕೊಳ್ಳುವುದು ಪಠ್ಯಪುಸ್ತಕ ಬರಹಗಾರರ ಪ್ರಮುಖ ಕಾಳಜಿಯಾಗಿರುತ್ತದೆ. ಆದರೆ ದೇಶದೆಲ್ಲೆಡೆ ಪ್ರಾಥಮಿಕ ತರಗತಿಗಳಿಗೆಂದು ಮೀಸಲಾದ ಪಠ್ಯಪುಸ್ತಕಗಳನ್ನು ವಿಶ್ಲೇಷಿಸಿದರೆ ಮಗುವಿನ ಶಾಲಾಪೂರ್ವ ಜ್ಞಾನ, ವಯಸ್ಸಿಗೆ ಅನುಗಣವಾದ ಸಾಮರ್ಥ್ಯ, ಅದರ ಪರಿಕಲ್ಪನಾತ್ಮಕ ಬೆಳವಣಿಗೆಯ ಮಟ್ಟಗಳಿಗೆ ಸಮರ್ಪಕವಾದ ಗಮನ ಹರಿಸಿಲ್ಲ ಎನ್ನುವುದು ತಿಳಿದುಬರುತ್ತದೆ. ನಿರ್ದಿಷ್ಟ ರಾಜ್ಯವೊಂದರ ಪಠ್ಯಪುಸ್ತಕಗಳನ್ನು ವಿಶ್ಲೇಷಿಸಿದ ಚೋಮಲ್, 'ಈ ಪಠ್ಯಪುಸ್ತಕಗಳಲ್ಲಿ ಮಾಹಿತಿಗಳ ಆಯ್ಕೆ, ಮಟ್ಟ (ಕ್ಲಿಷ್ಟತೆಯ ಮಟ್ಟ?) ಮತ್ತು ಅದರ ಪ್ರಸ್ತುತಿಯು ಮಕ್ಕಳ ವಯಸ್ಸಿಗೆ ಅನುಗುಣವಾದ ರೀತಿಯಲ್ಲಿ ಇರಬೇಕಾದದ್ದನ್ನು *ಅಸಮರ್ಪಕವಾಗಿ ನಿರ್ವಹಿಸಲಾಗಿದೆ*' ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ (ಒತ್ತು ನನ್ನದು).

ನಾವು ಯಾವ ರೀತಿಯಲ್ಲಿ ಪಠ್ಯಪುಸ್ತಕದ ಒಳ ವಿಷಯಗಳನ್ನು ಆಯ್ಕೆ ಮಾಡುತ್ತೇವೆ ಎಂಬುದು ಪುಸ್ತಕದ ಆಕಾರ ಮತ್ತು ಭೌತಿಕ ಸ್ವರೂಪಗಳ ಮೇಲೆ ಪರಿಣಾಮ ಬೀರುತ್ತದೆ. ಒಳ ವಿಷಯಗಳ ಅನುಕ್ರಮಣಿಕೆ, ಅಧ್ಯಾಯಗಳ ಸಂಯೋಜನೆ ಮತ್ತು ಉದ್ದ, ಗ್ರಾಫ್‌ಗಳು ಮತ್ತು ಕೋಷ್ಟಕಗಳು, ಪಠ್ಯದ ನಿರೂಪಣೆ, ಚಿತ್ರಗಳು, ಪೂರ್ವಭಾವಿ ಓದು, ಓದುವ ಹಂತ ಮತ್ತು ಓದಿದ ಅನಂತರದ ಚಟುವಟಿಕೆಗಳು ಹಾಗೂ ಅಧ್ಯಾಯದ ಕೊನೆಯಲ್ಲಿ ಇಡುವ ಪ್ರಶ್ನೆಗಳು-ಇವೆಲ್ಲವೂ ಪಠ್ಯಪುಸ್ತಕವು ಹೇಗೆ ಓದಿಸಿಕೊಂಡು ಹೋಗುತ್ತದೆ ಎನ್ನುವುದನ್ನು ನಿರ್ಧರಿಸುತ್ತವೆ. ಇಲ್ಲಿಯೂ ಕೂಡಾ ಭಾಷಾ ಪಠ್ಯವೊಂದನ್ನು ವಿನ್ಯಾಸ ಮಾಡುವಾಗ ಅದಕ್ಕೊಂದು ವರ್ಕ್ ಬುಕ್ ಸಹಾ ಅಗತ್ಯವಿದೆಯೆ ಎನ್ನುವುದನ್ನು ಬರೆಯುವವರು ನಿರ್ಧರಿಸಬೇಕಾಗುತ್ತದೆ, ಮತ್ತು ಸಮಾಜ ವಿಜ್ಞಾನದ ಪುಸ್ತಕವನ್ನು ವಿನ್ಯಾಸ ಮಾಡುವಾಗ ಪೂರಕ ಓದಿನ ಸಲುವಾಗಿ ಅಥವಾ ಹೆಚ್ಚಿನ ಓದಿಗಾಗಿ ನೀಡುವ ಪುಸ್ತಕಗಳ ಪಟ್ಟಿಯನ್ನು ಪುಸ್ತಕದ ಬರಹಗಾರರು ನಿರ್ಧರಿಸಬೇಕಾಗುತ್ತದೆ.

ಬೋಧನಾ ವಿಧಾನಕ್ಕೆ ಸಂಬಂಧಿಸಿದಂತೆ ಒಂದು ಪಠ್ಯಪುಸ್ತಕವು ಶಿಕ್ಷಕರಿಗೆ ಪ್ರಸ್ತುತವಾಗುವಂತೆ ಇರಬೇಕು, ಇದಕ್ಕಾಗಿ ಪಠ್ಯಪುಸ್ತಕದ ಬರಹಗಾರರು ಒಂದು 'ಶಿಕ್ಷಕರ ಕೈಪಿಡಿ'ಯನ್ನು ತಯಾರಿಸುವುದು ಉಚಿತ ಎಂದು ವಾದಿಸುತ್ತಾರೆ. ಆದರೆ ಬಹಳ ಮಂದಿ ಶಿಕ್ಷಕರು ಒಂದು ಪ್ರತ್ಯೇಕ ಕೈಪಿಡಿಯನ್ನು ಓದುವ ಗೋಜಿಗೆ ಹೋಗಲಾರರು ಎಂಬ ಆತಂಕದಿಂದ ಪಠ್ಯಪುಸ್ತಕವನ್ನು ವಿನ್ಯಾಸ ಮಾಡುವವರು ಬಹಳ ಸಲ ಪಠ್ಯಪುಸ್ತಕದೊಳಗೇ ಶಿಕ್ಷಕರ ಪುಟಗಳನ್ನೂ ಸೇರಿಸುತ್ತಾರೆ. ಶಿಕ್ಷಕರಿಗಾಗಿ ಪ್ರತ್ಯೇಕ ಪುಟಗಳಲ್ಲದೆ ಇನ್ನೂ ಕೆಲವು ಪುಟಗಳ ಅಡಿಯಲ್ಲಿ ಆ ಪುಟಗಳಲ್ಲಿ ಕೊಟ್ಟಿದ್ದನ್ನು ಬಳಸುವಾಗ ಶಿಕ್ಷಕರಿಗೆ ವಿಶೇಷ ಮಾರ್ಗದರ್ಶನದ ಅಗತ್ಯವಿದೆ ಎಂದು ಪಠ್ಯಪುಸ್ತಕ ಬರಹಗಾರರಿಗೆ ಅನಿಸಿ ಶಿಕ್ಷಕರಿಗೆಂದು ಚಿಕ್ಕ ಟಿಪ್ಪಣಿಗಳನ್ನೂ ಸೇರಿಸಲಾಗುತ್ತದೆ.

ಪಠ್ಯಪುಸ್ತಕದೊಳಗೆ ಏನೇನು ಸೇರಿಸಬೇಕು ಎಂಬುದನ್ನು ಆಯ್ಕೆ ಮಾಡುವ ಪ್ರಕ್ರಿಯೆಯು ಒಂದು ಸಾಧಾರಣ ಪ್ರಕ್ರಿಯೆ ಎನಿಸಬಹುದು. ಆದರೆ ಪಠ್ಯಪುಸ್ತಕವನ್ನು ಬರೆಯುವುದು ಹೆರಿಗೆ ಬೇನೆಯಷ್ಟೇ ಪ್ರಯಾಸದಾಯಕ ಎಂಬುದು ಅದರಲ್ಲಿ ಪಾಲ್ಗೊಂಡವರಿಗೆ ಗೊತ್ತಿರುತ್ತದೆ. ಪಠ್ಯಪುಸ್ತಕ ಸಮಿತಿಯ ಸದಸ್ಯರದ್ದು ಒಬ್ಬಬ್ಬೊರದೂ ಒಂದೊಂದು ದೃಷ್ಟಿಕೋನವಿರುತ್ತದೆ, ಜೊತೆಗೆ ಎಲ್ಲರ ಅನುಭವದ ಮಟ್ಟವೂ ಒಂದೇ ಆಗಿರುವುದಿಲ್ಲ. ಪಠ್ಯಪುಸ್ತಕದ ಒಳ ವಿಷಯಗಳನ್ನು ಆಯ್ಕೆ ಮಾಡುವಾಗ ಬಹಳ ಸಲ ಸಾಂಪ್ರದಾಯಿಕ ನಿಲುವುಗಳು, ಕಟ್ಟಾ ಸೈದ್ಧಾಂತಿಕ ಪಂಥಗಳು, ರಾಜಕೀಯ ದೃಷ್ಟಿಕೋನಗಳು, ವೈಯಕ್ತಿಕ ಸಂಬಂಧಗಳು ಮತ್ತು ಸಾಂಸ್ಥಿಕ ನಂಟುಗಳು ವೈರತ್ವವನ್ನು ಸೃಷ್ಟಿಸಿ ಸನ್ನಿವೇಶವನ್ನು ಬಿಗಡಾಯಿಸುತ್ತವೆ.

ಪಠ್ಯಪುಸ್ತಕದ ಒಳ ವಿಷಯಗಳನ್ನು ಎಷ್ಟು ಬಾರಿಗೊಮ್ಮೆ ಬದಲಾಯಿಸಬೇಕು? ಕೆಲವು ರಾಜ್ಯಗಳು ಪಠ್ಯಕ್ರಮ ಯೋಜನೆ ಅಥವಾ ಪಾಠಗಳನ್ನು ಪರಿಶೀಲಿಸುವ ಮುನ್ನವೇ ಪಠ್ಯಪುಸ್ತಕ ಪರಿಷ್ಕರಣೆಯ ಪ್ರಕ್ರಿಯೆಯನ್ನು ಆರಂಭಿಸಿರುತ್ತವೆ. ಪಠ್ಯಪುಸ್ತಕದೊಳಗಿನ ವಿಷಯಗಳು ಮತ್ತು ಪುಸ್ತಕಗಳ ಪರಿಶೀಲನೆ/ಪರಿಷ್ಕರಣೆ ಎಷ್ಟು ಸಲಕ್ಕೊಮ್ಮೆ ಮಾಡಬೇಕು ಎನ್ನುವುದನ್ನು ಕುರಿತ ಕರ್ನಾಟಕ ರಾಜ್ಯ ಶಿಕ್ಷಣ ನೀತಿಯಿಂದ (KSEP) ಹೊರಬಂದ ಮಾರ್ಗಸೂಚಿಗಳು ಗಮನಾರ್ಹವಾಗಿವೆ. ಶಿಕ್ಷಣ ನೀತಿಯ ದಾಖಲೆಪತ್ರದಲ್ಲಿ ಹೀಗಿದೆ:

'ಪಠ್ಯಪುಸ್ತಕಗಳ ಬಳಕೆಯನ್ನು ಸ್ಥಿರಗೊಳಿಸುವುದು ಮುಖ್ಯ. ದೋಷಗಳೇನೂ ಕಂಡುಬಂದಿಲ್ಲವೆಂದಾದರೆ ಕನಿಷ್ಠ ಮೂರು ವರ್ಷಗಳವರೆಗಾದರೂ ಅವುಗಳನ್ನು ಬದಲಾಯಿಸಲು ಹೋಗಬಾರದು. ಸಮಾಜದ ಬಡವರ್ಗದ ವಿದ್ಯಾರ್ಥಿಗಳ ಓದಿಗೆ ಬಹಳ ಸಲ ಶಾಲಾ ಪಠ್ಯಗಳೇ ಏಕಮೇವ ಸಾಮಗ್ರಿಯಾಗಿರುತ್ತವೆ ಎನ್ನುವುದನ್ನು ಗುರುತಿಸಬೇಕು. ಆದ್ದರಿಂದ ಪಠ್ಯಪುಸ್ತಕಗಳನ್ನು ತಯಾರಿಸುವಾಗ ಅದರ ಒಳ ವಿಷಯಗಳ ಬಗೆಗೆ ವಿಶೇಷ ಕಾಳಜಿ ವಹಿಸಬೇಕು ಮತ್ತು ಪರೀಕ್ಷೆಯೊಂದನ್ನೇ ಉದ್ದೇಶಿಸಿ ಅದನ್ನು ಬರೆಯಬಾರದು' (ಕೆಎಸ್ಇಪಿ, 2016:54).

## ಪಠ್ಯಪುಸ್ತಕ ಬರೆಯುವಾಗಿನ ಕಂಟಕಗಳು

ಮಾಧ್ಯಮದಲ್ಲಿ ಭಾರತದ ಪಠ್ಯಪುಸ್ತಕಗಳಿಗೇಕೆ ಅಷ್ಟೊಂದು ನಕಾರಾತ್ಮಕ ಪ್ರಚಾರ ಸಿಗುತ್ತದೆ ಎಂದು ಯಾರಿಗಾದರೂ  ಅಚ್ಚರಿಯಾಗಬಹುದು. ಸಂಗತಿಗಳ ಸತ್ಯಾಸತ್ಯತೆಯನ್ನು ಕುರಿತ ದೋಷಗಳು, ಅಪ್ರಸ್ತುತ ಅಥವಾ ಅನುಚಿತವಾದ ವಿಷಯಗಳು, ವ್ಯಾಕರಣ ದೋಷಗಳು, ಅನುಚಿತ ಭಾಷಾಬಳಕೆ, ತಪ್ಪುತಪ್ಪಾದ ಚಿತ್ರನಿದರ್ಶನಗಳು, ತಿರುವುಮುರುವಾದ ಪುಟಗಳು, ಖಾಲಿ ಪುಟಗಳು, ಶಾಲೆಗಳಿಗೆ  ಪಠ್ಯ ಪುಸ್ತಕಗಳು ತಡವಾಗಿ ಸಿಗುವುದು ಮುಂತಾದವುಗಳು ಸರಕಾರಕ್ಕೆ ಬಹಳ ಮುಜುಗರವನ್ನುಂಟು ಮಾಡುತ್ತವೆ. ಪಠ್ಯಪುಸ್ತಕವನ್ನು ಬರೆಯುವವರಿಗೆ ಸಮಯಾವಕಾಶದ ನಿರ್ಬಂಧವಿರುವುದು ಅತ್ಯಂತ ಅಪಾಯಕಾರಿಯಾದ ಒಂದು ಅಂಶವಾಗಿದೆ ಮತ್ತು ಅದೇ ಪಠ್ಯಪುಸ್ತಕದಲ್ಲಿ ಕಂಡುಬರುವ ದೋಷಗಳಿಗೆ ದಾರಿಯಾಗುತ್ತದೆ. ದೇಶದ ಎಲ್ಲ ರಾಜ್ಯಗಳಿಗೂ ಸಂಬಂಧಿಸಿ ಹೇಳುವುದಾದರೆ, ಹೆಚ್ಚುಕಡಮೆ ಎಲ್ಲ ರಾಜ್ಯಗಳಲ್ಲಿಯೂ ಪಠ್ಯಪುಸ್ತಕ ಸಮಿತಿಯಲ್ಲಿರುವವರು ಪೂರ್ಣಾವಧಿ ವೃತ್ತಿನಿರತ ಪಠ್ಯಪುಸ್ತಕ ಬರಹಗಾರರಾಗಿರುವುದಿಲ್ಲ. ಕೆಲವು ದಿನಗಳ ಪಠ್ಯಪುಸ್ತಕ ಕಾರ್ಯಾಗಾರಗಳಿಗೆ ಎನ್ಸಿಇಆರ್‌ಟಿ ಯಿಂದ ಅವರೆಲ್ಲ ನಿಯೋಜಿತಗೊಂಡಿರುತ್ತಾರೆ. ಈ ಸಮಯದಲ್ಲಿ ಕಾರ್ಯಾಗಾರದಲ್ಲಿ ನಡೆಯುವ ಚರ್ಚೆಗಳ ಮೂಲಕ ಅವರು ವಿಷಯಗಳನ್ನು ಆಯ್ಕೆ ಮಾಡುತ್ತಾರೆ ಮತ್ತು ಮೊದಲ ಕರಡನ್ನು ತಯಾರಿಸುತ್ತಾರೆ. ಈ ಮೊದಲ ಕರಡು ಪ್ರತಿಯು ಇಡೀ ತಂಡದ ಮೂಲಕ ಅಂತಿಮಗೊಳಿಸಲ್ಪಟ್ಟು ಸಮಿತಿಯ ಅಧ್ಯಕ್ಷರ ಅನುಮತಿಯನ್ನು ಪಡೆದಿರುತ್ತದೆ.

ಸಾಮಾನ್ಯವಾಗಿ  ಸಂಬಂಧಪಟ್ಟ ಕಲಾವಿದರೊಬ್ಬರಿಂದ ಎಲ್ಲ ಚಿತ್ರಗಳನ್ನು  ಬಿಡಿಸಲಾಗುತ್ತದೆ ಅಥವಾ ಕೆಲವೊಮ್ಮೆ ಹೊರಗಿನ ಏಜೆನ್ಸಿಯಿಂದ  ಮಾಡಿಸಲಾಗುತ್ತದೆ. ಆದರೆ ಅದು ಅಂತಿಮ ಪ್ರತಿ ಸಿದ್ಧಗೊಂಡ ಅನಂತರವೇ ಆಗಿರುತ್ತದೆ. ಪಠ್ಯಪುಸ್ತಕ ಬರಹಗಾರರು ಮತ್ತು ಚಿತ್ರ ಕಲಾವಿದರ ನಡುವೆ ವಿಚಾರ ವಿನಿಮಯ ನಡೆಯುವುದೇ ಇಲ್ಲ ಎನ್ನಬಹುದು. ಬರಹಗಾರರು ವಿಷಯಕ್ಕೆ ಸಂಬಂಧಿಸಿ ಯಾವ ಚಿತ್ರ ಹಾಕಬೇಕು ಎಂದು ಅಂದುಕೊಂಡಿರುತ್ತಾರೋ ಅದಕ್ಕೂ, ಚಿತ್ರ ಕಲಾವಿದರು ವಿಷಯವನ್ನು ಯಾವ ರೀತಿ ನಿರೂಪಿಸುತ್ತಾರೋ ಅದಕ್ಕೂ ಹೊಂದಾಣಿಕೆ ಇರಬೇಕು, ಆದರೆ ಬರಹಗಾರರು ಮತ್ತು ಚಿತ್ರಕಲಾವಿದರ ನಡುವೆ ಸಂವಹನವಾಗದೇ  ಇರುವುದರಿಂದ ಬಹಳ ಸಲ ಕಥನದ ವಿಷಯಕ್ಕೆ ಮತ್ತು ಬೋಧನೆಯ ದೃಷ್ಟಿಯಿಂದಲೂ ಸಂಬಂಧವೇ ಇರದ ಚಿತ್ರಗಳು ಅಲ್ಲಿ ಸೇರಿಕೊಂಡುಬಿಡುತ್ತವೆ.

ತಯಾರಾದ ಪುಸ್ತಕಗಳನ್ನು ರಾಜ್ಯದ ವಿವಿಧ ಭಾಗಗಳಿಗೆ ತಲಪಿಸುವುದು ಜವಾಬ್ದಾರಿ ಹೊತ್ತ ಶಿಕ್ಷಣಾಧಿಕಾರಿಗಳಿಗೆ ಒಂದು ದುಃಸ್ವಪ್ನವೇ ಆಗಿರುತ್ತದೆ. ರಾಜ್ಯಗಳ ರಾಜಧಾನಿಗಳಿಂದ ರಾಜ್ಯದ ವಿವಿಧ ಭಾಗಗಳಿಗೆ ಪಠ್ಯಪುಸ್ತಕಗಳನ್ನು ತಲಪಿಸುವ ಸಲುವಾಗಿ ಟೆಂಡರ್ ಕರೆಯುವುದು, ಪುಸ್ತಕಗಳ ಸಾಗಾಟಕ್ಕೆ ಸಮಯಕ್ಕೆ ಸರಿಯಾಗಿ ಹಣಸಂದಾಯ ಮಾಡುವುದು, ಜಿಲ್ಲೆ ಅಥವಾ ಉಪ-ವಿಭಾಗೀಯ ಮಟ್ಟದಲ್ಲಿ ಪಠ್ಯಪುಸ್ತಕಗಳ ದಾಸ್ತಾನು ವ್ಯವಸ್ಥೆ, ಒಟ್ಟೂ ಶಾಲೆಗಳು, ಮಕ್ಕಳು ಮತ್ತು ಪುಸ್ತಕಗಳನ್ನು

ಕುರಿತ ಅಂಕಿಅಂಶಗಳನ್ನು ದಾಖಲಿಸುವುದು ಇವೆಲ್ಲ ಸರ್ಕಾರಿ ಶಾಲೆಗಳಲ್ಲಿನ ಉಚಿತ ಪುಸ್ತಕ ವಿತರಣೆ ಪ್ರಕ್ರಿಯೆಯ ಮೇಲೆ ಪರಿಣಾಮ ಬೀರುತ್ತವೆ. ಅನೇಕ ಸಲ ಪುಸ್ತಕಗಳನ್ನು ಸಾಗಿಸುವವರಿಗೆ ಹಿಂದಿನ ವರ್ಷದ ಹಣ ಸಂದಾಯವಾಗದೇ ಅವರು (ಸರಕು ಸಾಗಣೆದಾರರು) ಜಿಲ್ಲೆಗಳಿಗೆ ಪುಸ್ತಕ ಕೊಂಡೊಯ್ಯಲು ನಿರಾಕರಿಸುವುದೂ ಉಂಟು. ಶಾಲೆಗಳಿಗೆ ಪುಸ್ತಕಗಳನ್ನು ಒಯ್ಯುವುದು ನಿಜವಾಗಿಯೂ ಕಷ್ಟದ ಕೆಲಸ!

***

## ಪರಾಮರ್ಶನೆಗಳು


Chomal, A. 2016. Workbooks or Playbooks?- Experience of Developing Workbooks for Rajasthan Government Schools, Learning Curve, Issue 25

National Council of Educational Research and Training. 2006. The Position Paper on Curriculum, Syllabus and Textbooks. New Delhi: NCERT

KJA. 2016. Karnataka State Education Policy. Karnataka Jnana Aaayoga, Bengaluru

Kumar, K. 1986. Textbooks and Educational Culture, Economic and Political Weekly, Vol. 21, No. 30, pp. 1309-1311

Koutselini M. 2012. Textbooks as Mechanisms for Teachers' Sociopolitical and Pedagogical Alienation, The New Politics of the Textbook, Constructing Knowledge. Editors. Hickman H., Porfilio B.J.,Vol 2. Rotterdam, Sense Publishers

http://cbseacademic.nic.in/web_material/Circulars/2019/05_Circular_2019.pdf


***


**ಪಾರ್ಥಸಾರಥಿ ಮಿಶ್ರಾ:** ಇವರು ನಾಟಿಂಗ್‌ಹ್ಯಾಮ್ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿಯನ್ನು ಮತ್ತು ಕಲ್ಕತ್ತಾ ವಿಶ್ವವಿದ್ಯಾಲಯದಿಂದ ಪಿಎಚ್.ಡಿ.ಯನ್ನೂ ಪಡೆದಿದ್ದಾರೆ. ಅವರು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ವಿಸಿಟಿಂಗ್ ಉಪನ್ಯಾಸಕರಾಗಿದ್ದಾರೆ. ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಭಾಷೆಯಲ್ಲಿ ಪಠ್ಯ ಸಾಮಗ್ರಿಯ ಬೆಳವಣಿಗೆಯನ್ನು ಬೋಧಿಸುವುದಲ್ಲದೆ ಅವರು ಸ್ಕೂಲ್ ಆಫ್ ಕಂಟಿನ್ಯೂಂಗ್ ಎಜುಕೇಷನ್ ಅಂಡ್ ಯುನಿವರ್ಸಿಟಿ

ರೀಸೋರ್ಸ್ ಸೆಂಟರ್ ನಲ್ಲಿ ವೃತ್ತಿಪರ ಕೋರ್ಸುಗಳನ್ನು ವಿನ್ಯಾಸ ಮಾಡುವುದರಲ್ಲಿ ಪಾಲ್ಗೊಂಡಿದ್ದಾರೆ ಮತ್ತು ಅದರ ಪ್ರಕ್ರಿಯೆಯಲ್ಲಿ ಸಲಹೆ-ಸಹಕಾರಗಳನ್ನೂ ನೀಡಿದ್ದಾರೆ.

ಅವರನ್ನು ಸಂಪರ್ಕಿಸಲು: partha.misra@azimpremjifoundation.org

ಅನುವಾದ: ಪ್ರಜ್ಞಾ ಎನ್

ಪರಿಶೀಲನೆ: ನಾಗಮಣಿ ಎಸ್